***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 20.01.2026***

***ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ***

1. ನನಗೆ ಮಾನ್ಯಶ್ರೀ ಮತ್ತು ನವ್ಯಶ್ರೀ ಎಂಬ ಇಬ್ಬರು ಹೆಣ್ಣುಮಕ್ಕಳು. ನಾನು ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುವಾಗ ನನ್ನ ಚಿಕ್ಕಮಗಳು ನವ್ಯಶ್ರೀ ರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದೆನು. ಮಾನ್ಯಶ್ರೀಗೆ ಈಗ 13 ವರ್ಷ. ನವ್ಯಶ್ರೀ ಯನ್ನು ಶಾಲೆಗೆ ಸೇರಿಸದೇ ಇರುವುದರಿಂದ ನನ್ನ ಜೊತೆಯಲ್ಲೆ ಗಾರ್ಮೆಂಟ್ಸ್ ಗೆ ಕರೆದುಕೊಂಡು ಹೋಗುತ್ತಿದ್ದೆನು. ಹಾಳಯ್ಯ ಎಂಬುವವರು ನಮ್ಮ ಸಂಬಂಧಿಕರು. ಹಾಳಯ್ಯನವರು ನೀವು ಮೈಸೂರಿನಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿರುವಾಗ ಬಂದಿದ್ದರು ಎಂದರೆ ಸಾಕ್ಷಿ ನಾನು ಕೋಮಾಗೆ ಹೋಗಿದ್ದರಿಂದ ಯಾವುದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನನಗೆ ಪ್ರಜ್ಞೆ ಬಂದಾಗ ಹಾಳಯ್ಯ ಮತ್ತು ನಿಮ್ಮ ಮನೆಯವರು ಆಸ್ಪತ್ರೆಯಲ್ಲಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಹಾಳಯ್ಯ ಮತ್ತು ಜಗದೀಶ್ ಎಂಬುವವರು ನಿಮಗೆ ಪ್ರಜ್ಞೆ ಬಂದಾಗ ಆಸ್ಪತ್ರೆಯಲ್ಲಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿ, ನನಗೆ ಪ್ರಜ್ಞೆ ಬಂದಾಗ ನರ್ಸ್ ಇದ್ದರು ಎಂದು ಹೇಳುತ್ತಾರೆ.

2. ಅಪಘಾತವಾಗಿದೆ ಎನ್ನಲಾದ ರಸ್ತೆ ಹೆದ್ದಾರಿ ಎಂದರೆ ಸರಿ. ಆ ರಸ್ತೆಯಲ್ಲಿ ಹೆಚ್ಚಿನ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಪ್ರಜ್ಞೆ ಬಂದ ನಂತರ ವೈದ್ಯರು, ದಾದಿಯನ್ನು ಯಾರು ನಿಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದು ಕೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ

ಎಂದು ಹೇಳುತ್ತಾರೆ. 15 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನೀವು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ರೂ.4 ಲಕ್ಷ ಹಣ ಚಿಕಿತ್ಸೆಗಾಗಿ ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ ಹಾಗೂ ಅದಕ್ಕೆ ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ಇನ್ನೊಂದು ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ವೈದ್ಯರು ಬರದುಕೊಟ್ಟಿಲ್ಲ. ಸಾಕ್ಷಿ ಮೌಖಿಕವಾಗಿ ಹೇಳಿದ್ದಾರೆಂದು ಹೇಳುತ್ತಾರೆ. ಇನ್ನೊಂದು ಶಸ್ತ್ರ ಚಿಕಿತ್ಸೆಯ ಅಗತ್ಯ ಇಲ್ಲದೆ ಇದ್ದರೂ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ಎಷ್ಟು ದಿನಕ್ಕೆ ಬರಬೇಕೆಂದು ವೈದ್ಯರು ಸಲಹೆ ನೀಡಿದರು ಎಂದರೆ ಸಾಕ್ಷಿ ಕಾಲು ಊತ ಬಂದಾಗ, ನೋವು ಬಂದಾಗ ಬರಬೇಕೆಂದು ಹೇಳಿದರು ಎಂದು ಹೇಳುತ್ತಾರೆ. ಹೊರರೋಗಿಯಾಗಿ ನಾನು ಆಸ್ಪತ್ರೆಗೆ ಸುಮಾರು 15 ಬಾರಿ ಹೋಗಿರುತ್ತೇನೆ. ಇತ್ತೀಚೆಗೆ ಡಿಸೆಂಬರ್ ತಿಂಗಳಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದೆನು.

3. ರೂ.300/- ಕೊಟ್ಟು ಸಹಾಯಕರನ್ನು ನೇಮಿಸಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಕಾರು ಬಾಡಿಗೆ ಮತ್ತು ಔಷಧಿಗಾಗಿ ರೂ.5 ಸಾವಿರ ಒಂದು ಬಾರಿಗೆ ಖರ್ಚಾಗುತ್ತಿತ್ತು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನೀವು ತಿಂಗಳಿಗೆ ರೂ.25 ಸಾವಿರ ಸಂಬಳವನ್ನು ತೆಗೆದುಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಗಾರ್ಮೆಂಟ್ಸ್ ನಿಂದ, ವ್ಯವಸಾಯದಿಂದ, ಹೈನುಗಾರಿಕೆಯಿಂದ

*ತಿಂಗಳಿಗೆ ರೂ.25 ಸಾವಿರ ದುಡಿಯುತ್ತಿದ್ದೆ ಎಂದು ಹೇಳುತ್ತಾರೆ. ನಮಗೆ 10 ಗುಂಟೆ ಜಮೀನಿದೆ. ಅದು ನಮ್ಮ ಅತ್ತೆ ಹೆಸರಿನಲ್ಲಿದೆ. ಆ ಪಹಣಿಗಳನ್ನು ಈ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಿಮ್ಮ ಮಗು ರಸ್ತೆಗೆ ಓಡಿ ಹೋದಾಗ ಕರೆದುಕೊಂಡು ಬರಲು ನೀವೇ ಸ್ವತಃ ರಸ್ತೆ ಮಧ್ಯಕ್ಕೆ ಹೋಗಿ ಸರಿಯಾಗಿ ಬರುತ್ತಿದ್ದ ಕಾರಿಗೆ ಡಿಕ್ಕಿ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಮಗುವನ್ನು ಯಾವತ್ತು ಕೆಳಗೆ ಬಿಟ್ಟಿಲ್ಲ ಸೊಂಟದ ಮೇಲೆ ಎತ್ತಿಕೊಂಡಿದ್ದೆ ಎಂದು ಹೇಳುತ್ತಾರೆ. ನನ್ನ ಪ್ರಮಾಣಪತ್ರದ ಸಂಗತಿಗಳನ್ನು ತಯಾರಿಸಲು ಮಾಹಿತಿಯನ್ನು ಸ್ವತಃ ನಾನೇ ಕೊಟ್ಟಿರುತ್ತೇನೆ. ನಿಮ್ಮ ಅರ್ಜಿ ಮತ್ತು ಪ್ರಮಾಣಪತ್ರದಲಿಪ್ಲಿ ನಿಮ್ಮ ಮಗುವನ್ನು ನಾನು ಎತ್ತಿಕೊಂಡಿದ್ದೆ ಎಂದು ಬರೆಸಿಲ್ಲ ಎಂದರೆ ಸರಿ. ಪರಿಹಾರ ಪಡೆದುಕೊಳ್ಳಲೆಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬರೆಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***